ಮಳೆಯ ಅಭ್ಯಂಗದ ನಂತರದ ಜೀವಕಳೆಯಲ್ಲಿ ಬೆಟ್ಟಗುಡ್ಡ–ಕಾಡು ಕಂಗೊಳಿಸುತ್ತಿರುವ ಸಂದರ್ಭ ಚಾರಣಕ್ಕೆ ಪ್ರಶಸ್ತ ಕಾಲವೂ ಹೌದು. ಚಾರಣವೆನ್ನುವುದು ಕಾಡಿನ ದಾರಿ ಅಥವಾ ಬೆಟ್ಟದ ಏರು ಇಳಿಜಾರನ್ನು ಕ್ರಮಿಸುವುದು ಎಂದಷ್ಟೇ ಅಲ್ಲ; ಆ ನಡಿಗೆಯಲ್ಲಿ ಪ್ರಕೃತಿಪ್ರೇಮವೂ ನಮ್ಮದಾಗಬೇಕು. ನಡಿಗೆಯ ಉದ್ದೇಶವೇ ಏನನ್ನಾದರೂ ಸಾಧಿಸುವುದು. ಮನರಂಜನೆ ಹಾಗೂ ಮನೋವಿಕಾಸದ ರೂಪದಲ್ಲಿನ ಚಾರಣದ ನಡಿಗೆ ಪ್ರಕೃತಿಯೊಂದಿಗೆ ನಮಗೆ ಆಪ್ತ ಸಂವಾದಕ್ಕೆ ಅವಕಾಶ ಕಲ್ಪಿಸುವಂತಾಗಬೇಕು ಎನ್ನುವ ಆಶಯದ ಈ ಬರಹ, ಪ್ರಕೃತಿಪ್ರೇಮ ಇಲ್ಲದೆಹೋದರೆ ಚಾರಣಕ್ಕೆ ಮೌಲ್ಯವೇ ಇಲ್ಲ ಎನ್ನುವುದನ್ನು ಒತ್ತಿಹೇಳುತ್ತದೆ. ಕೊರೊನಾ ಸೋಂಕಿನ ಸಂದರ್ಭದಲ್ಲಿ ಮನೆಯ ಚೌಕಟ್ಟಿನಲ್ಲಿ ಮುದುಡಿರುವ ಮೈಮನಸ್ಸುಗಳು ಅರಳಲು ಚಾರಣ ಶಕ್ತಿಮದ್ದಿನಂತೆ ಕೆಲಸ ಮಾಡಬಲ್ಲದು. 'ಚಾರಣಕ್ಕೆ ಬನ್ನಿ' ಎಂದು ಪ್ರಕೃತಿಯೇನೋ ಆಹ್ವಾನ ನೀಡುತ್ತಿದೆ. ಈ ಆಹ್ವಾನವನ್ನು ಸ್ವೀಕರಿಸುವಾಗ, ಚಾರಣಿಗರಾಗಿ ನಮಗಿರುವ ಜವಾಬ್ದಾರಿಯನ್ನು ಮರೆಯಬಾರದು.

■ ದಿನೇಶ್ ಹೊಳ್ಳ

# ಟಿಕ್ ಟಿಕ್ ಟಿಕ್ ಇದು ಟ್ರೆಕ್ಕಿಂಗ್ ಕಾಲ

